ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | |
|---|---|---|
| | ಓ ಎಸ್ ನಂ. 94/2021 | |
| | ಡಿ.ಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 10.03.2026 | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಜಿ.ಜಿ.ಐ. ವಕೀಲರಿಂದಃ**

1. ಮಾರುತೆಪ್ಪ ಆತನ ತಂದೆ ಹನಮಪ್ಪ ಮರಣ ಹೊಂದುವ ಪೂರ್ವದಲ್ಲೇ ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಮ್. ಆರ್ ನಂ.5063 ರ ಪ್ರಕಾರ ದಾವಾ ಆಸ್ತಿ ಸಂಖ್ಯೆ 292 ಮತ್ತು 305 ರಲ್ಲಿ ಪಾಲುವಿಭಾಗವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ನನ್ನ ಮಾವನ ಹಿಸ್ಸೆಗೆ ಬಂದಿದ್ದು , ಆತ ತೀರಿಕೊಂಡಿದ್ದರಿಂದ, ನನ್ನ ಗಂಡನಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಮಾರುತಿ ಹಾಗೂ ಆತನ ಸಹೋದರರ ನಡುವೆ ಸಮನಾಗಿ ವಿಭಾಗವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ತನ್ನ ತಂದೆಯ ಆಸ್ತಿಯನ್ನು ವಾದಿಯರನ್ನು ಕೇಳದೆ, ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ದಾಖಲಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, 2008 ರಲ್ಲಿ ನನ್ನ ಗಂಡನ ಅಜ್ಜಿ ತೀರಿಕೊಂಡಾಗ ವಾದಿಯರಿಗೆ ಬಂಗಾರದ 1 ತೊಲೆಯ ಪದಕದ ಸರ, 1 ಜೊತೆ ಕಿವಿಯೋಲೆ, 15 ತೊಲೆಯ ಬೆಳ್ಳಿಯ ನಡಪಟ್ಟಿ , 1 ತಾಮ್ರದ ಕೊಡ, 1 ಹಂಡೆ, ಇನ್ನಿತರ ವಸ್ತುಗಳನ್ನು ವಾದಿಯರಿಗೆ ನೀಡಲಾಗಿತ್ತು, ಅದನ್ನು ಅವರು ಹೇಗೆ ಹಂಚಿಕೊಂಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಸದರಿಯವುಗಳನ್ನು ಯಾವ ಉದ್ದೇಶಕ್ಕಾಗಿ ಕೊಟ್ಟೆವು ಅಂತಾ ಗೊತ್ತಿಲ್ಲ. ಸದರಿ ಒಡವೆಗಳು ನನ್ನ ಗಂಡನ ಅಜ್ಜಿಯದ್ದಾಗಿದ್ದವು. ಯಾವ ಉದ್ದೇಶಕ್ಕಾಗಿ ಕೊಡಲಾಗಿತ್ತು ಅಂತಾ ಬರವಣಿಗೆಯಲ್ಲಿ ಬರೆಯಲಾಗಿಲ್ಲ. ವಾದಿಯರ ಮತ್ತು ನನ್ನ ಗಂಡನ ನಡುವೆ ಈವರೆಗೂ ದಾವಾ ಆಸ್ತಿಯಲ್ಲಿ ಪಾಲುವಿಭಾಗವಾಗಿಲ್ಲ ಎಂದರೆ ಸಾಕ್ಷಿಯು ಆ ಕುರಿತು ನನಗೆ ಏನೂ ಗೊತ್ತಿಲ್ಲ. ಆದರೆ, ವಾದಿಯರಿಗೆ ಬಂಗಾರ ನೀಡಲಾಗಿತ್ತು ಅಂತಾ ನುಡಿಯುತ್ತಾರೆ.

2. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ, ಮಾರುತೆಪ್ಪ ಇವರು ಮರಣ ಹೊಂದಿದ ನಂತರ, ಅವರ ಮಕ್ಕಳಾದ ವಾದಿಯರಿಗೆ ಮತ್ತು ನನ್ನ ಗಂಡನಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿ ಅಲ್ಲ. ವಾದಿಯರ ಸಹಿಯುಳ್ಳ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಕುರಿತು ನನಗೆ ಗೊತ್ತಿಲ್ಲ. ವಾದಿಯರಿಗೆ ಸಮನಾದ ಹಿಸ್ಸೆ ಇದ್ದರೂ, ಇಲ್ಲ ಅಂತಾ ಮತ್ತು ಬಂಗಾರ ನೀಡಿದ್ದೇವೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಮುಂಡರಗಿ.